ಇಳೆಯ ತಬ್ಬಲು ಬರುವ ಮೋಡಗಳ ನಡುವೆ ತುಷಾರ ಮಳೆಯ ಸಿಂಚನ. ಹೆಜ್ಜೆ ಹಾಕುವಾಗ ಮೈಯೆಲ್ಲ ಜಾಗ್ರತೆ. ಮನಸೆಲ್ಲ ಹುಮ್ಮಸ್ಸು. ಮಳೆಗಾಲ ಕಾಯಕಜೀವಿಗಳಿಗೆ ಊರಿಗೆ, ನೆಲಕ್ಕೆ ಕಟ್ಟಿಹಾಕುವ ಋತುಮಾನ. ಆದರೆ ಹಸಿರುಟ್ಟು, ಮಳೆಯಲ್ಲಿ ಮಿಂದು ನಿಲ್ಲುವ ಇಳೆಯ ಚೆಲುವೆಯರಾದ ಬೆಟ್ಟ ಕಣಿವೆಗಳಿಗೆ ಭೇಟಿ ನೀಡುವುದು, ಈ ಕಾಲದ ಸಂಚಾರಿಗಳಿಗೆ ಅತಿ ಇಷ್ಟದ ಪ್ರವಾಸವಾಗಿದೆ. ಸಂಚಾರಿಯಾಗುವುದು, ಮನೋಲೋಕದಲ್ಲಿ ಸುವಿಹಾರಿಯಾಗುವುದು, ಪ್ರಕೃತಿಯ ಮುಂದೆ ನಾವೆಷ್ಟು ಗೌಣ ಎಂಬ ಅರಿವಿನೊಂದಿಗೆ ಹಾದಿ ಸವೆಸುವುದು, ಜೀವನ ಸವಿಯುವುದು ಮಳೆಪ್ರವಾಸದ ಉದ್ದೇಶ.

